೨. ಸದರಿ ಸಾಲದ ಹಣದಿಂದ ಸುಮಾರು ೬೬ ಯೋಜನೆಗಳನ್ನು ಕೈಗೊಂಡಿದ್ದು ಅವುಗಳಲ್ಲಿ ೧೬ ಯೋಜನೆಗಳು ಮುಂಕ್ತಾಯ ಹಂತದಲ್ಲಿದ್ದು ಉಳಿದ ೫೦ ಯೋಜನೆಗಳು ಪ್ರಗತಿಯಲ್ಲಿವೆ.

ಶ್ರೀ ಎಸ್. ಷಫಿ ಅಹ್ಮಮದ್ .—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ೫೨.೩೦ ಕೋಟಿ ರೂಪಾಯಿಗಳನ್ನು ಹುಡ್ಕೊದಿಂದ ಮತ್ತು ೬.೫೭ ಕೋಟಿ ರೂಪಾಯಿಗಳನ್ನು ಎಚ್.ಡಿ.ಎಫ್.ಸಿ. ಯವರಿಂದ ಸಾಲವಾಗಿ ತೆಗೆದುಕೊಂಡಿದ್ದೇವೆಂದು ತಿಳಿಸಿದ್ದಾರೆ. ೬೬ ಸ್ಕೀಮ್‌ಗಳು ಜಾರಿಯಲ್ಲಿವೆ. ೧೬ ಸ್ಕೀಮ್‌ಗಳು ಆನ್‌ಗೋಯಿಂಗ್ ಮತ್ತು ೫೦ ಸ್ಕೀಮ್‌ಗಳು ಪೆಂಡಿಂಗ್‌ನಲ್ಲಿದೆ ಎಂದು ಹೇಳಿದ್ದಾರೆ. ತುಮಕೂರಿನಲ್ಲಿ ಕಳೆದ ೧೦ ವರ್ಷಗಳ ಹಿಂದೆ ತೆಗೆದುಕೊಳ್ಳಲಾದ ಎಷ್ಟೋ ಯೋಜನೆಗಳು ಈಗಲೂ ಪೆಂಡಿಂಗ್‌ನಲ್ಲಿ ಇವೆ, ಅದನ್ನು ಯಾವ ಕಾಲದಲ್ಲಿ ಮುಂಗಿಸುತ್ತೀರಿ ಎಂಬ ಬಗ್ಗೆ ತಿಳಿಸಬೇಕು.

ಶ್ರೀ ಟಿ. ಎನ್. ನರಸಿಂಹಮೂರ್ತಿ .—ನಾನು ಉತ್ತರದಲ್ಲಿ ಮಾನ್ಯ ಸದಸ್ಯರಿಗೆ ಸ್ಪಷ್ಟವಾಗಿ ಹೇಳಿದ್ದೇನೆ. ನಮಗೆ ಸಾಲ ನೀಡುವ ಸಂಸ್ಥೆಗಳಿಗೆ ಇನ್ನೂ ಹೆಚ್ಚಿಗೆ ಒತ್ತಡ ತಂದು, ಹಣವನ್ನು ತಂದು ಈ ಯೋಜನೆಗಳನ್ನು ಆದಷ್ಟು ಬೇಗ ಜಾರಿಗೊಳಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ ಎಂದು ಹೇಳಿ ಬಯಸುತ್ತೇನೆ.

ಶ್ರೀ ಎಸ್. ಷಫಿ ಅಹಮ್ಮದ್ .—ನಮ್ಮಲ್ಲಿ ೧೦ ವರ್ಷಗಳಿಂದ ಈ ಸ್ಕೀಮ್‌ಗಳು ಪೆಂಡಿಂಗ್‌ನಲ್ಲಿವೆ. ಈಗಾಗಲೇ ಸಾಕಷ್ಟು ವಿಳಂಬವಾಗಿದೆ. ಇನ್ನು ಮುಂದಾದರೂ ಇವುಗಳನ್ನು ಶೀಘ್ರದಲ್ಲಿ ಕೈಗೊಳ್ಳುತ್ತೀರಾ ?

ಶ್ರೀ ಟಿ. ಎನ್. ನರಸಿಂಹಮೂರ್ತಿ .—ಮಾನ್ಯ ಸದಸ್ಯರು ಹೇಳಿದ ಹಾಗೆ ಸಾಕಷ್ಟು ವಿಳಂಬವಾಗಿದೆ. ಇನ್ನು ಮೇಲೆ ಆ ವಿಳಂಬ ಮಾಡುವುದಿಲ್ಲವೆಂಬ ಖಾತ್ರಿಯನ್ನು ಅವರಿಗೆ ಕೊಡುತ್ತೇನೆ.

ಶ್ರೀ ಧರ್ಮಸಿಂಗ್ .—ಕರ್ನಾಟಕ ರಾಜ್ಯದ ತುಮಕೂರು ಜಿಲ್ಲೆಗೆ ಸೀಮಿತವಾಗಿ ಮಾನ್ಯ ಸದಸ್ಯರು ಪ್ರಶ್ನೆ ಕೇಳಿದ್ದಾರೆ. ಆದರೆ ಇಡೀ ಕರ್ನಾಟಕ ರಾಜ್ಯದಲ್ಲಿ ಹುಡ್ಕೋ ನೆರವಿನಿಂದ ಒಟ್ಟು ಎಷ್ಟು ನೆರವನ್ನು ಇದಕ್ಕಾಗಿ ತೆಗೆದುಕೊಂಡಿದ್ದೀರಿ ಎಂದು ದಯವಿಟ್ಟು ತಿಳಿಸುವಿರಾ ? ಹಾಗೂ ಕಳೆದ ೩ ವರ್ಷಗಳಲ್ಲಿ ಕಟ್ಟಿಸಿದ ಮನೆಗಳ ಸಂಖ್ಯೆ ಹಾಗೂ ಖರ್ಚು ಮಾಡಿದ ಹಣದ ವಿವರವನ್ನು ತಿಳಿಸುತ್ತೀರಾ ?

ಶ್ರೀ ಟಿ. ಎನ್ ನರಸಿಂಹಮೂರ್ತಿ .—ಮಾನ್ಯ ಅಧ್ಯಕ್ಷರೇ ೧೯೮೭–೮೮ರಲ್ಲಿ ಹೊಸದಾಗಿ ಕೈಗೊಂಡ ಯೋಜನೆಗಳು ೧೮, ಇದರ ಅಂದಾಜು ವೆಚ್ಚ ೧೮.೯೨ ಕೋಟಿ. ಒಟ್ಟು ಮನೆಗಳ ಸಂಖ್ಯೆ ೩೦೪೩. ಮುಂಕ್ತಾಯ ಹಂತದಲ್ಲಿರುವ ಯೋಜನೆಗಳು ೧೦, ಪ್ರಗತಿ ಹಂತದಲ್ಲಿರುವುವು ೮ ಇದಕ್ಕೆ ಮೊದಲನೇ ಅಂದಾಜಿನಲ್ಲಿ ನಾವು ಖರ್ಚುಮಾಡಬೇಕಾದ್ದು ೧೪.೮೦ ಕೋಟಿ. ಮನೆಗಳ ಸಂಖ್ಯೆ ೩೦೪೩, ಮುಂಕ್ತಾಯ ಹಂತದಲ್ಲಿರುವುವು ೧೦, ಪ್ರಗತಿ ಹಂತದಲ್ಲಿರುವುವು ೮. ೮೮–೮೯ನೇ ಸಾಲಿನಲ್ಲಿ ಕೈಗೊಂಡ ಯೋಜನೆಗಳು ೩೩, ಅಂದಾಜುವೆಚ್ಚ ೩೩ ಕೋಟಿ ಸಾವಿರ ರೂಪಾಯಿ. ಹುಡ್ಕೊದಿಂದ ಬಂದ ಸಾಲ ೨೫ ಕೋಟಿ. ೩೧ ಲಕ್ಷ. ಒಟ್ಟು ಮನೆಗಳು ೬೩೪೧ ಮುಂಕ್ತಾಯದ ಹಂತದ ಯೋಜನೆಗಳು ೬ ಪ್ರಗತಿ ಹಂತದಲ್ಲಿರುವ ಯೋಜನೆಗಳು ೭, ೮೯–೯೦ರಲ್ಲಿ ಕೈಗೊಂಡ ಯೋಜನೆಗಳು ೧೫, ಅಂದಾಜುವೆಚ್ಚ ೧೬ ಕೋಟಿ, ಹುಡ್ಕೊದಿಂದ ಬಂದ ಸಾಲ ೧೨ ಕೋಟಿ, ಒಟ್ಟು ಮನೆಗಳು ೩೫೬೨, ಉಳಿದಿರುವ ಯೋಜನೆಗಳು ೧೭, ಇವು ಪ್ರಗತಿಯಲ್ಲಿವೆ. ಒಟ್ಟು ೬೬ ಯೋಜನೆಗಳಲ್ಲಿ ನಾವು ಖರ್ಚು ಮಾಡಬೇಕಾದ್ದು ೬೮ ಕೋಟಿ, ಹುಡ್ಕೊದಿಂದ ಬಂದದ್ದು ೫೨ ಕೋಟಿ ಮತ್ತು ಸುಮಾರು ೧೨೯೪ ನಾವು ಕಟ್ಟಬೇಕಾದ ಮನೆಗಳ ಪೈಕಿ ಮುಂಕ್ತಾಯದ ಹಂತದಲ್ಲಿರುವ ಯೋಜನೆಗಳು ೧೬, ಪ್ರಗತಿಯ ಹಂತದಲ್ಲಿರುವ ಯೋಜನೆಗಳು ೫೦.

ರಾಜ್ಯದಲ್ಲಿ ಖಾಲಿ ಇರುವ ತೋಟಗಾರಿಕೆ ಅಧಿಕಾರಿಗಳ ಹುದ್ದೆಯ ಸಂಖ್ಯೆ

೧೧೧೬. ಶ್ರೀ ಮಂಜುನಾಥ ಸಿ. ಕುನ್ನೂರ (ಶಿಗ್ಗಾಂವ) .—ಮಾನ್ಯ ಕೃಷಿ ಮತ್ತು ತೋಟಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

(ಅ) ರಾಜ್ಯದಲ್ಲಿ ಎಷ್ಟು ಜನ ತೋಟಗಾರಿಕೆ ಅಧಿಕಾರಿಗಳ ಹುದ್ದೆ ಖಾಲಿ ಇದೆ ಹಾಗೂ ಧಾರವಾಡ ಜಿಲ್ಲೆಯಲ್ಲಿ ಎಷ್ಟು ಜನ ತಾಲ್ಲೂಕಿಂ ಮಟ್ಟದ ತೋಟಗಾರಿಕೆ ಅಧಿಕಾರಿಗಳ ಹುದ್ದೆಗಳು ಖಾಲಿ ಇದೆ ?

(ಅ) ಶಿಗ್ಗಾಂವ ಮತ್ತು ಸವಣೂರು ತಾಲ್ಲೂಕುಗಳಲ್ಲಿ ತೋಟಗಾರಿಕೆ ಅಧಿಕಾರಿಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಹಾಗಿದ್ದಲ್ಲಿ ಇನ್ನೂ ಎಷ್ಟು ದಿನಗಳಲ್ಲಿ ಈ ಅಧಿಕಾರಿಗಳ ಸ್ಥಾನವನ್ನು ತುಂಬಲಾಗುವುದು ?

ಶ್ರೀ ಎಸ್. ಬಂಗಾರಪ್ಪ (ಕೃಷಿ ಮತ್ತು ತೋಟಗಾರಿಕೆ ಸಚಿವರು) .—

(ಅ) ತೋಟಗಾರಿಕೆ ಅಧಿಕಾರಿಗಳ ಹುದ್ದೆಗಳು ಇರುವುದಿಲ್ಲ. ಆದಾಗ್ಯೂ ರಾಜ್ಯದಲ್ಲಿ ಒಟ್ಟು ೨೮೮ ಸಹಾಯಕ ತೋಟಗಾರಿಕೆ ಅಧಿಕಾರಿಗಳ ಹುದ್ದೆಗಳು ಖಾಲಿ ಇವೆ. ಹಾಲಿ ಧಾರವಾಡ ಜಿಲ್ಲೆಯಲ್ಲಿ ಒಟ್ಟು ೮ ತಾಲ್ಲೂಕು ಮಟ್ಟದ ಅಧಿಕಾರಿಗಳ ಹುದ್ದೆ ಖಾಲಿ ಇದೆ.

(ಆ) ಬಂದಿದೆ. ಸರಕಾರದ ಅಧಿಸೂಚನೆ ಸಂಖ್ಯೆ ಎ.ಹೆಚ್.ಡಿ ೩೨೮ ಎ.ಹೆಚ್.ಇ ೯೦, ದಿನಾಂಕ ೨೯-೫-೯೦ರಲ್ಲಿ ಸವಣೂರು ತಾಲ್ಲೂಕಿನ ಹುದ್ದೆಯನ್ನು ಭರ್ತಿಮಾಡಲಾಗಿದೆ. ಹಾಗೂ ಶಿಗ್ಗಾಂವ ತಾಲ್ಲೂಕು ತೋಟಗಾರಿಕೆ ಅಧಿಕಾರಿಯ ಹುದ್ದೆಯನ್ನು ಆದಷ್ಟು ಬೇಗನೆ ಭರ್ತಿಮಾಡಲಾಗುವುದು.

ಶ್ರೀ ಮಂಜುನಾಥ್ ಸಿ. ಕುನೂರ್.—ಅಧ್ಯಕ್ಷರೇ, ರಾಜ್ಯದಲ್ಲಿ ೨೦೮ ಸಹಾಯಕ ತೋಟಗಾರಿಕಾ ಅಧಿಕಾರಿಗಳ ಹುದ್ದೆ ಖಾಲಿಯಿದ್ದು ಧಾರವಾಡ ಜಿಲ್ಲೆಯಲ್ಲೇ ೮ ತಾಲ್ಲೂಕು ಮಟ್ಟದ ಅಧಿಕಾರಿಗಳ ಹುದ್ದೆ ಖಾಲಿ ಇವೆ ಮತ್ತು ಶಿಗ್ಗಾಂವ ತಾಲೂಕಿನಲ್ಲಿ ತೋಟಗಾರಿಕೆ ಅಧಿಕಾರಿಗಳನ್ನು ತೀವ್ರವಾಗಿ ತುಂಬುತ್ತೇವೆಂದು ಮಾನ್ಯ ಸಚಿವರು ಹೇಳಿದ್ದಾರೆ. ಈ ತೋಟಗಾರಿಕೆಗೆ ನಾವು ಬಹಳ ಮಹತ್ವ ಕೊಡಬೇಕಾಗಿದೆ. ಸತತವಾಗಿ ೩-೪ ವರ್ಷಗಳಿಂದ ಬರಗಾಲ ಬಂದಿದ್ದರಿಂದ ಹಣ್ಣು ಹಂಪಲುಗಳ ಉತ್ಪತ್ತಿ ಕಡಿಮೆ ಆಗಿದೆ. ಈ ದಿಶೆಯಲ್ಲಿ ರೈತರಿಗೆ ತರಬೇತಿ ಮತ್ತು ಸಾಲಸೌಲಭ್ಯ ಕೊಡುವ ಬಗ್ಗೆ ಮಾನ್ಯ ಸಚಿವರು ತೀವ್ರ ಗಮನ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ಅಧ್ಯಕ್ಷರೆ, ಉತ್ತರದಲ್ಲಿ ಹೇಳಿರುವಂತೆ ತೋಟಗಾರಿಕೆ ಅಧಿಕಾರಿಗಳನ್ನು ನೇಮಿಸುವ ವಿಚಾರದಲ್ಲಿ ಸಧ್ಯಕ್ಕೆ ಎಕಾನಮಿ ಆರ್ಡರ್ ಇರುವುದರಿಂದ ತುಂಬುವುದಕ್ಕೆ ಆಗುವುದಿಲ್ಲ. ಈ ಬಗ್ಗೆ ಸರ್ಕಾರ ಅಂತಿಮ ತೀರ್ಮಾನ ತೆಗೆದುಕೊಂಡಾಗ ಆ ಹುದ್ದೆಗಳನ್ನು ತುಂಬುವ ಬಗ್ಗೆ ನಾನು ನನ್ನ ಜವಾಬ್ದಾರಿಯನ್ನು ನಿರ್ವಹಿಸುತ್ತೇನೆ.

ಶ್ರೀ ಗೋಪಿನಾಥ ಆರ್. ಸಾಂದ್ರಾ.— ಅಧ್ಯಕ್ಷರೇ, ಕೇವಲ ಪ್ರಶ್ನೆ ಹಾಕಿದ ಸದಸ್ಯರಿಗೆ ಮಾತ್ರ ಉತ್ತರ ಸಿಗುತ್ತಿದೆ. ಉಳಿದವರಿಗೆ ಸಹ ಉಪಪ್ರಶ್ನೆ ಹಾಕುವುದಕ್ಕೆ ಅವಕಾಶ ಮಾಡಿಕೊಡಬೇಕು ಕೊನೆ ಪಕ್ಷ ಸಂಬಂಧಪಟ್ಟ ಜಿಲ್ಲಾ ಶಾಸಕರಿಗಾದರೂ ಉತ್ತರ ಪ್ರತಿ ಸಿಗುವಂತೆ ವ್ಯವಸ್ಥೆ ಮಾಡಬೇಕು.

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ಸದಸ್ಯರ ಅಭಿಪ್ರಾಯವನ್ನು ನಾನು ಒಪ್ಪಿಕೊಳ್ಳುತ್ತೇನೆ. ಈಗಿನ ಸಭೆಯ ನಿಯಮಾವಳಿ ಪ್ರಕಾರ ಎಲ್ಲರಿಗೂ ಉತ್ತರ ಕಳಿಸಲು ಸಾಧ್ಯವಿಲ್ಲ. ಹಿಂದೆ ಆರೀತಿ ಇತ್ತು. ವೈಯಕ್ತಿಕವಾಗಿ ನಿಮ್ಮ ಅಭಿಪ್ರಾಯ ಒಪ್ಪುತ್ತೇನೆ. ಕೆಲವು ಸಲ ಇಡೀ ರಾಜ್ಯಕ್ಕೆ ಸಂಬಂಧಪಟ್ಟಂತೆ ಪ್ರಶ್ನೆಗಳಿರುತ್ತವೆ. ಆದ್ದರಿಂದ ಎಲ್ಲರಿಗೂ ಉತ್ತರ ಕಳಿಸುವುದು ಒಳ್ಳೆಯದು.

ಅಧ್ಯಕ್ಷರು.— ಎಲ್ಲರಿಗೂ ಉತ್ತರ ಕಳಿಸುತ್ತಿದ್ದೇವೆ. ನಿಮಗೆ ಇಂದು ಮಿಸ್ ಆಗಿರಬೇಕು. ಸರ್ವೇ ಸಾಧಾರಣವಾಗಿ ಎಲ್ಲರಿಗೂ ಉತ್ತರ ಕಳಿಸಲಾಗುತ್ತಿದೆ.

ಬಿಜಾಪುರ, ಬೆಳಗಾಂ ಮತ್ತು ಕಾರವಾರಗಳಲ್ಲಿ ಸ್ನಾತಕೋತ್ತರ ಕೇಂದ್ರಗಳ ಸ್ಥಾಪನೆ.

೧೨೭೫. ಡಾ॥ ಆರ್. ಬಿ. ಚೌದ್ರಿ (ಸಿಂಧಗಿ) ಮಾನ್ಯ ಶಿಕ್ಷಣ, ಯುವಜನ ಸೇವೆ, ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ, ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಬಿಜಾಪುರ, ಬೆಳಗಾಂ ಮತ್ತು ಕಾರವಾರಗಳಲ್ಲಿ ಸ್ನಾತಕೋತ್ತರ ಕೇಂದ್ರಗಳನ್ನು ಒಮ್ಮೆಲೆ ತೆರೆಯಬೇಕಿತ್ತೆನ್ನುವ ಅಂಶವು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಬೆಳಗಾಂನಲ್ಲಿ ಮಾತ್ರವೇ ಸ್ನಾತಕೋತ್ತರ ಕೇಂದ್ರವನ್ನು ಸ್ಥಾಪಿಸಲು ಕಾರಣವೇನು ?

ಇ) ಈಗಾಲಾದರೂ ಸರ್ಕಾರ ಬಿಜಾಪುರ ಮತ್ತು ಕಾರವಾರಗಳಲ್ಲಿ ಸ್ನಾತಕೋತ್ತರ ಕೇಂದ್ರಗಳನ್ನು ಸ್ಥಾಪಿಸುವುದೇ ?

ಈ) ಹಾಗಿದ್ದಲ್ಲಿ ಪ್ರತಿ ಪರ್ಷ ಕಾರವಾರ ಮತ್ತು ಬಿಜಾಪುರ ಸ್ನಾತಕೋತ್ತರ ಕೇಂದ್ರಗಳಿಗೆ ಕೊಡ ಮಾಡುವ ಅನುದಾನವೆಷ್ಟು ?